

## ಅಡಿಕೆ ಹಾಳೆ ತಟ್ಟೆಯ ದ್ವಾರ

ಅಡಿಕೆ ಹಾಳೆಯ ತಟ್ಟೆಯನ್ನು ಊಟಕ್ಕೆ ಬಳಸುವುದು ಸಾಮಾನ್ಯ. ಆದರೆ, ಅದರಿಂದ ದ್ವಾರವನ್ನೂ ನಿರ್ಮಿಸಬಹುದೆಂಬುದಕ್ಕೆ ಈ ಚಿತ್ರ ಸಾಕ್ಷಿ. ಈಚೆಗೆ ಶ್ರೀಕ್ಷೇತ್ರ ಧರ್ಮಸ್ಥಳ ಲಕ್ಷದೀಪೋತ್ಸವದ ಕೊನೆಯ ದಿನ ಲಕ್ಷಾಂತರ ಭಕ್ತರಿಗೆ ಅನ್ನಸಂತರ್ಪಣೆ ನಡೆಯಿತು. ಅನ್ನಸಂತರ್ಪಣೆ ಸ್ಥಳಕ್ಕೆ ಹೋಗುವ ದ್ವಾರವನ್ನು ಅಡಿಕೆ ಹಾಳೆಯ ತಟ್ಟೆಗಳನ್ನು ಬಳಸಿ ನಿರ್ಮಿಸಿದ್ದು ವಿಶೇಷವಾಗಿತ್ತು. ಇದು ಕ್ಷೇತ್ರಕ್ಕೆ ಭೇಟಿಕೊಟ್ಟ ಲಕ್ಷಾಂತರ ಭಕ್ತರ ಮೆಚ್ಚುಗೆಗೂ ಪಾತ್ರವಾಯಿತು. ನಿತ್ಯ ನೀರು ಸಿಂಪಡಿಸಿದರೆ ಈ ದ್ವಾರ ಒಂದು ತಿಂಗಳವರೆಗೆ ಹಾಳಾಗುವುದಿಲ್ಲ ಎಂಬುದು ದ್ವಾರ ನಿರ್ಮಿಸಿದವರ ಮಾತು. ಇದಕ್ಕೆ ತಗಲುವ ವೆಚ್ಚವೂ ಕಡಿಮೆ. ನೋಡಲೂ ಆಕರ್ಷಕ. ದ್ವಾರ ತಯಾರಿಗೆ ಬೇರೆ ಬೇರೆ ಗಾತ್ರ ಮತ್ತು ಆಕಾರದ ಸುಮಾರು ಒಂದು ಸಾವಿರದಷ್ಟು ಹಾಳೆಗಳನ್ನು ಉಪಯೋಗಿಸಲಾಗಿದೆ.

–ಡಾ. ಚಂದ್ರಹಾಸ್ ಚಾರ್ಮಾಡಿ, ಬೆಳ್ತಂಗಡಿ

## ಕಾಡಣಬೆಗಳ ಕ್ರಿಸ್‌ಮಸ್ ಸ್ಟಾರ್

ಈಚೆಗೆ ನಡೆದ ಕ್ರಿಸ್‌ಮಸ್ ಸಂಭ್ರಮಾಚರಣೆ ವೇಳೆ ನನಗೆ ಆಕರ್ಷಕವೆನಿಸಿದ್ದು ಈ ಕಾಡಣಬೆಗಳ ಕ್ರಿಸ್‌ಮಸ್ ಸ್ಟಾರ್. ಸಾಮಾನ್ಯವಾಗಿ ಕ್ರಿಸ್‌ಮಸ್ ಸ್ಟಾರ್ ಅನ್ನು ಬೇರೆ ಬೇರೆ ರೀತಿಯಾಗಿಯೂ ಕಂಡಿದ್ದ ನನಗೆ ಕಾಡಣಬೆಗಳಿಂದ ರೂಪುಗೊಂಡಿದ್ದು ತುಸು ಭಿನ್ನವಾಗಿ ಆಕರ್ಷಿಸಿತು. ಕಾಡಲ್ಲಿ ಸಿಗುವ ಅಣಬೆಗಳಲ್ಲಿ ಒಂದಾದ ರೈಶೀ ಮಶ್ರೂಮ್‌ಗಳನ್ನು ಸಂಗ್ರಹಿಸಿ, ಒಣಗಿಸಿ, ಅವುಗಳಿಗೆ ಬಣ್ಣ ಹಚ್ಚಲಾಗಿದೆ. ನಂತರ ಎಲ್ಲ ಅಣಬೆಗಳನ್ನು ಜೋಡಿಸಿ ದೊಡ್ಡದಾದ ನಕ್ಷತ್ರ ಮಾಡಲಾಗಿದೆ.

–ಮೆಲಿಷ್ಯಾ ಡಿಸೋಜಾ







## ಮರದಿಂದ ಮಾಡಿದ ಸಾಂಬಾರು ಡಬ್ಬಿ

ಅಡುಗೆ ಮನೆಯ ಆಲಂಕಾರಿಕ ವಸ್ತುಗಳಲ್ಲಿ ಸಾಂಬಾರು ಡಬ್ಬಿ ಒಂದು. ಸಿದ್ದಾಪುರದ ಸೋವಿನಕೊಪ್ಪದಲ್ಲಿರುವ ತಂಗಿಯ ಮನೆಗೆ ಹೋದಾಗ ಚಿತ್ರದಲ್ಲಿನ ಮರದ ಸಾಂಬಾರು ಡಬ್ಬಿ ಕಣ್ಣಿಗೆ ಬಿತ್ತು. ವೃತ್ತಾಕಾರದ ಈ ಡಬ್ಬಿ 1 ಅಡಿ ವ್ಯಾಸವಿದ್ದು, 1 ಇಂಚು ದಪ್ಪವಿದೆ.

ಮೇಲ್ಗಡೆ ಒಂದು ತಿರುಗುವ ಮುಚ್ಚಳವನ್ನು ವಿನ್ಯಾಸಗೊಳಿಸಲಾಗಿದೆ. ಮರದ ಬೆಣೆಯಿಂದಲೇ ಇದನ್ನು ಗಟ್ಟಿಗೊಳಿಸಿದ್ದು, ಇದು ಐದು ಖಾನೆಗಳನ್ನು ಹೊಂದಿದೆ. ಈ ಖಾನೆಗಳಲ್ಲಿ ಸಾಂಬಾರು ಪದಾರ್ಥಗಳನ್ನು ಶೇಖರಣೆ ಮಾಡಬಹುದು. ಚಿತ್ರದಲ್ಲಿ ಕಾಣುತ್ತಿರುವ ಮರದ ಸಾಂಬಾರು ಬಟ್ಟಲು ಸುಮಾರು 100 ವರ್ಷ ಹಳೆಯದು. ಇನ್ನೂ ಇದು ಬಳಕೆಯಲ್ಲಿದೆ.

–ಗೋಪಾಲಕೃಷ್ಣ ಹೆಗಡೆ, ಶಿರಸಿ